ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001
ದೂ: +91-80-2226 0017; +91-80-2226 7470; +91-80-2226 1047
ಮಿಂಚಂಚೆ: shq@bsgkarnataka.org.in ಅಂತರ್ಜಾಲ: www.bsgkarnataka.org

ಸಂಖ್ಯೆ:ಎಸ್‌ಹೆಚ್‌ಕ್ಯೂ/Org.1/BWC/ 1217 /2026-27 ದಿನಾಂಕ: 08.10.2026

ಜಿಲ್ಲಾ ಕಾರ್ಯದರ್ಶಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ಕರ್ನಾಟಕ

ಮಾನ್ಯರೆ,

ವಿಷಯ:- ರಾಜ್ಯ ಮಟ್ಟದ ಪದಕ ತರಬೇತಿ ಶಿಬಿರಕ್ಕೆ ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳನ್ನು ನಿಯೋಜಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಸಂಸ್ಥೆಯ ವತಿಯಿಂದ ದಿ|| ಕೊಂಡಜ್ಜಿ ಬಸಪ್ಪನವರ 44ನೇ ವರ್ಷದ ಪುಣ್ಯ ಸ್ಮರಣಾರ್ಥವಾಗಿ ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳಿಗೆ ರಾಜ್ಯ ಮಟ್ಟದ ಪದಕ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದ ವಿವರಗಳು ಕೆಳಕಂಡಂತಿರುತ್ತದೆ.

ಶಿಬಿರ	ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಿಗೆ ರಾಜ್ಯ ಮಟ್ಟದ ಪದಕ ತರಬೇತಿ ಶಿಬಿರ
ಸ್ಥಳ	ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ಹರಿಹರ ತಾಲ್ಲೂಕು ದಾವಣಗೆರೆ ಜಿಲ್ಲೆ.
ದಿನಾಂಕಗಳು	**12.11.2026 ರಿಂದ 15.11.2026ರ ವರೆಗೆ**
ನೊಂದಣಿ ಶುಲ್ಕ	ತಲಾ ರೂ.500/-
ಹಾಜರಾಗುವ ದಿನಾಂಕ/ ವೇಳೆ	ದಿನಾಂಕ: 12.11.2026 ಬೆಳಗ್ಗೆ 9.30 ಗಂಟೆಗೆ
ಬಿಡುಗಡೆ ಮಾಡುವ ದಿನಾಂಕ/ವೇಳೆ	ದಿನಾಂಕ: 15.11.2026 ಮಧ್ಯಾಹ್ನ 4.00 ಗಂಟೆಗೆ
ಊಟ ಮತ್ತು ವಸತಿ	ರಾಜ್ಯ ಸಂಸ್ಥೆಯಿಂದ ವ್ಯವಸ್ಥೆ ಮಾಡಲಾಗಿದೆ.
ತರಬೇಕಾದ ವಸ್ತುಗಳು	ಸಮವಸ್ತ್ರ, ಬದಲಾಯಿಸುವ ಉಡುಪು, ಲಘುವಾದ ಬೆಚ್ಚನೆಯ ಹಾಸಿಗೆ, ತಟ್ಟೆ, ಲೋಟ, ಪೆನ್ನು, ನೋಟ್ ಪುಸ್ತಕ, ಟಾರ್ಚ್, ಹಗ್ಗ, ಸ್ಟೇವ್ಸ್, ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಅವಶ್ಯವಿರುವ ವಸ್ತುಗಳು, ಶಿಬಿರಕ್ಕೆ ಬೇಕಾದ ಸಾಮಗ್ರಿಗಳು ಇತ್ಯಾದಿ.
ಪ್ರತಿ ಜಿಲ್ಲೆಯಿಂದ ಭಾಗವಹಿಸುವ ಕೋಟಾ	6 ಸ್ಕೌಟ್ಸ್, 4 ರೋವರ್ಸ್ + 01 ದಳನಾಯಕರು 6 ಗೈಡ್ಸ್, 4 ರೇಂಜರ್ಸ್ + 01 ದಳನಾಯಕರು
ಪ್ರಯಾಣ ಭತ್ಯೆ	ಭಾಗವಹಿಸುವ ವಿದ್ಯಾರ್ಥಿಗಳು ತಮ್ಮ ಸ್ಥಳದಿಂದ ಶಿಬಿರ ಸ್ಥಳಕ್ಕೆ ಹೋಗಿ ಬರುವ ಪ್ರಯಾಣ ವೆಚ್ಚ ಮತ್ತು ಶಿಬಿರ ಶುಲ್ಕವನ್ನು ಆಯಾಯ ಶಾಲಾ ಸ್ಕೌಟ್-ಗೈಡ್/ಕಾಲೇಜು ರೋವರ್-ರೇಂಜರ್ ನಿಧಿಯಿಂದ ಭರಿಸುವುದು.
ಅರ್ಹ ಮಕ್ಕಳನ್ನು ಮಾತ್ರ ಶಿಬಿರಕ್ಕೆ ನಿಯೋಜಿಸುವುದು.	ದ್ವಿತೀಯ ಸೋಪಾನ ತರಬೇತಿ ಪಡೆದು & ಪ್ರಮಾಣ ಪತ್ರ ಹೊಂದಿರುವ ಸ್ಕೌಟ್ಸ್-ಗೈಡ್ಸ್‌ಗಳು ಮತ್ತು ನಿಪುಣ್ ತರಬೇತಿ ಪಡೆದ ರೋವರ್ಸ್-ರೇಂಜರ್ಸ್‌ಗಳು ಶಿಬಿರದಲ್ಲಿ ಭಾಗವಹಿಸುವುದು.
ಶಿಬಿರದ ವಿಶೇಷತೆಗಳು	ವಿವಿಧ ಪ್ರಾವೀಣ್ಯತಾ ಪದಕಗಳು, ಪೇಯಿಂಟಿಂಗ್ ಚಟುವಟಿಕೆಗಳು, ಪೋಸ್ಟರ್ ಮೇಕಿಂಗ್, Artificial Intelligence (A.I), ಅದರ ಬಗ್ಗೆ ಮಾಹಿತಿ, ಕೌಶಲ್ಯಾಭಿವೃದ್ಧಿ, ಪ್ರಕೃತಿ ವಿಕೋಪ ಪರಿಹಾರ, ಪೋಟೋಗ್ರಫಿ, Event Management ವಿಷಯಗಳ ಬಗ್ಗೆ ಪ್ರಾತ್ಯೇಕ್ಷಿಕತೆ, ಮಾಹಿತಿ ತಿಳುವಳಿಕೆ, ಪ್ರದರ್ಶನಗಳನ್ನು ಪದಕ ತರಬೇತಿ ನೀಡಲಾಗುವುದು.

ಆನ್‌ಲೈನ್‌ನಲ್ಲಿ ನೊಂದಾವಣಿ	https://zfrmz.in/1PdoLGs4jmxutM96sg7i
ಸಂಪರ್ಕಿಸಬೇಕಾದವರ ಸಂಖ್ಯೆ	ಶ್ರೀ. ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು(ಸ್ಕೌ), ಕರ್ನಾಟಕ - 9448914540 ಶ್ರೀಮತಿ ಮಂಜುಳ. ಸಿ, ರಾಜ್ಯ ಸಂಘಟನಾ ಆಯುಕ್ತರು(ಗೈ), ಕರ್ನಾಟಕ - 9482433516
ನೊಂದಾಯಿಸಲು ಕೊನೆಯ ದಿನಾಂಕ	ದಿನಾಂಕ: **05.11.2026.**

ತಮ್ಮ ಜಿಲ್ಲೆಗೆ ನಿಗಧಿಪಡಿಸಿರುವ ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಮತ್ತು ದಳನಾಯಕರುಗಳ ಕೋಟಾ ಸಂಖ್ಯೆಯನ್ನುತಪ್ಪದೇ ನಿಯೋಜಿಸುವುದು, ಈ ಶಿಬಿರದಲ್ಲಿ ಭಾಗವಹಿಸುವವರ ವಿವರಗಳನ್ನು ದಿನಾಂಕ: 05.11.2026ರ ಒಳಗಾಗಿ ರಾಜ್ಯ ಸಂಸ್ಥೆಗೆ ಪತ್ರ ಮುಖೇನ ಕಳುಹಿಸಲು ಕೋರಲಾಗಿದೆ.

ಸ್ಕೌಟ್ಸ್ – ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ

ಪ್ರತಿಯನ್ನು : ಎ.ಎಸ್.ಓ.ಸಿ/ಡಿಓ/ಡಿಓಟಿ/ಎಸ್‌ಜಿವಿ/ಎಸ್‌ಜಿವಿಗಳ ಸೂಕ್ತ ಕ್ರಮಕ್ಕಾಗಿ